**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ**33/2018**

ಸಿ.ಡಬ್ಲ್ಯೂ –೯ ಪಿ.ಡಬ್ಲ್ಯೂ -೫

| | | |
|---|---|---|
| ಹೆಸರು | ಃ | ಈರಣ್ಣ |
| ತಂದೆಃಗಂಡ | ಃ | ಶಾಂತಪ್ಪ |
| ವಯಸ್ಸು | ಃ | ೩೭ ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | ಃ | ಕಡಗಂಚಿ |

ದಿನಾಂಕಃ೧೯.೦೫.೨೦೨೩
ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದಃ**

ಆರೋಪಿ ಪರಿಚಯ ಇರುತ್ತದೆ. ಚಾಸಾ-೧ ರಿಂದ ೮, ೧೦ ರಿಂದ ೧೫ ರವರ ಪರಿಚಯ ಇರುತ್ತದೆ. ೬.೪೫ ನಿಮಿಷಕ್ಕೆ ಅಪಘಾತವಾಗಿದ್ದು ೭.೧೫ ಗಂಟೆ ೧೫ ನಿಮಿಷಕ್ಕೆ ಚಾಸಾ-೧ ರವರು ಬಂದು ನಮಗೆ ತಿಳಿಸಿದರು ಆಗ ನಾನು, ಚಾಸಾ-೧೧, ೮, ೭ ರವರು ಘಟನಾ ಸ್ಥಳಕ್ಕೆ ಹೊದೆವು. ಅಪಘಾತವಾದ ವ್ಯಕ್ತಿಯನ್ನು ಅಂಬ್ಯುಲೆನ್ಸನಲ್ಲಿ ಹಾಕಿ ಚಾಸಾ-೧ ರವರ ಜೊತೆಗೆ ಕಳುಹಿಸಿಕೊಟ್ಟೆವು. ೧೨ ನೇ ತಾರಿಕಿನಂದು ಮತ್ತೆ ನಮ್ಮನ್ನು ಕರೆದರು. ೧೩ ನೇ ತಾರಿಕಿನಂದು ಶಿವಾನಂದ ಮೃತಪಟ್ಟಿರುತ್ತಾನೆ. ೧೪ ನೇ ತಾರಿಕಿನಂದು ಸಿಪಿಐ ಆಳಂದ ಕರೆಸಿದರು. ನಮ್ಮ ಹೇಳಿಕೆಯನ್ನು ಪಡೆದರು.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ದಿಃ03.05.2017 ರಂದು ಘಟನೆ ಜರುಗಿತು ಎಂದರೆ ಸರಿ. ಚಾಸಾ-1 ರವರ ತಮ್ಮಂದಿರಾದ ಶ್ರೀಶೈಲ ಹಾಗೂ ಶಿವಾನಂದ ರವರು ಮೋಟಾರ ವಾಹನ ನಂ.ಕೆಎ-32 ಇಬಿ-3268 ರಲ್ಲಿ ಹೊಲಕ್ಕೆ ಹೊಗುತ್ತಿದ್ದಾಗ ಎನಡಿಪಿ ಪೇಟ್ರೊಲ ಬಂಕ ಖೋಡಿಯಾಳ ಕ್ರಾಸ ಹತ್ತಿರ ಕಾರ ಸಂಖ್ಯೆ ಕೆಎ-32 ಜಿ-6448 ರ ಚಾಲಕ ಕಾರನ್ನು ಅತೀವೇಗವಾಗಿ ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಬಂದು ಅವರಿಬ್ಬರಿಗೆ ಡಿಕ್ಕಿಪಡಿಸಿದ ಕಾರಣ ಶ್ರೀಶೈಲ ಸ್ಥಳದಲ್ಲೆ ಮೃತಪಟ್ಟಿರುತ್ತಾರೆ ಎಂದರೆ ಸರಿ. ಶಿವಾನಂದ ರವರಿಗೆ ಅಸ್ತವ್ಯಸ್ತವಾಗಿ ಭಾರಿಗಾಯವಾಗಿರುತ್ತದೆ ಎಂದರೆ ಸರಿ. ನಮ್ಮೂರಿನ ನಾಗಣ್ಣ ಅವನನ್ನು ಅಂಬ್ಯುಲೆನ್ಸನಲ್ಲಿ ಯುನೈಟೆಡ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾನೆ ಎಂದರೆ ಸರಿ. ದಿಃ12.05.2017 ರಂದು ಆರೋಪಿಯನ್ನು ತೋರಿಸಿ ಅಪಘಾತ ಪಡಿಸಿರುವ ವ್ಯಕ್ತಿ ಅವನೆ ಎಂದು ಹೇಳಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲು ಆರೋಪಿ ಪರ ಶ್ರೀ ಎಸ.ಎಸ.ಸಿ. ವಕೀಲರಿಂದ.**

ಚಾಸಾ-15 ರವರು ನನ್ನ ಸಹೋದರರ. ಚಾಸಾ-15 ರವರು ಕಲಬುರಗಿಯಲ್ಲಿ ವಕೀಲ ವೃತ್ತಿಯಲ್ಲಿ ಇರುತ್ತಾರೆ ಎಂದರೆ ಸರಿ. ಚಾಸಾ-1 ರವರಿಗೆ ಅವರ ತಮ್ಮಂದಿರು ಮೃತಪಟ್ಟ ಪರಿಹಾರ ಧನವನ್ನು ಚಾಸಾ-15 ರವರ ಮುಖಾಂತರ ಬಂದಿರುತ್ತದೆ ಎಂದರೆ ಸರಿ. ಚಾಸಾ-15 ರವರೆ ದೂರು ನೀಡುವಾಗ ಆಸ್ಪತ್ರೆಗೆ ಹೊಗುವಾಗ ಜೊತೆಯಲ್ಲಿ ಇದ್ದರು ಎಂದರೆ ಸರಿ. ಚಾಸಾ-15 ರವರು ಪರಿಹಾರ ಧನ ಸಿಗಬೇಕೆಂದು ಅನೂಕೂಲವಾಗುವಂತೆ ದೂರನ್ನು ಬರೆಸಿರುತ್ತಾರೆ ಎಂದರೆ ಸರಿ ಅಲ್ಲ. ನಾನು ಚಾಸಾ-1 ರವರ ಬಿಗ ಎಂದರೆ ಸರಿ. ನಾನು ಘಟನೆಯಾಗಿದೆ ಎಂದು ಹೇಳುತ್ತಿರುವುದು ಕಣ್ಣಿನಿಂದ ನೋಡಿಲ್ಲ ಎಂದರೆ ಸರಿ. ಘಟನೆಯಾಗಿದೆ ಎಂದು ಚಾಸಾ-1 ರವರು ತಿಳಿಸಿದ ನಂತರ ನನಗೆ ಗೊತ್ತಾಗಿರುತ್ತದೆ ಎಂದರೆ ಸರಿ. ಘಟನಾ ಸ್ಥಳ ಕಡಗಂಚಿ ಪಾಟಿಯಿಂದ 500 ಮೀಟರ ಅಂತರದಲ್ಲಿ ಇದೆ. ಆಳಂದ ಕಲಬುರಗಿ ರಸ್ತೆ ಎಮಬಿಪಿ ಪೆಟ್ರೋಲ ಬಂಕಿನ ಉತ್ತರ – ದಕ್ಷಿಣ ದಿಕ್ಕಿನಲ್ಲಿ ಇದೆ ಎಂದರೆ ಸರಿ. ಸದರಿ ರಸ್ತೆ ಡಬಲ್ ರೋಡ ಎಂದರೆ ಸರಿ. ಡಬಲ್ ರೋಡ ಇದ್ದಕಾರಣ ಎದುರು ಬರುವ ವಾಹನಗಳು ಸುಗಮವಾಗಿ ಹೊಗುತ್ತವೆ ಎಂದರೆ ಸರಿ. ಪೆಟ್ರೋಲ ಬಂಕ ಹತ್ತಿರ ಫೂಲ ಇರುವ ಕಾರಣ ವಾಹನಗಳು ನಿಧಾನವಾಗಿ ಬರುತ್ತವೆ ಎಂದರೆ ಸರಿ.

ಎನಡಿಪಿ ಪಟ್ರೊಲ ಬಂಕ ಹಾಗೂ ಖೋಡಿಯಾಳ ಕ್ರಾಸ 100 ಮೀಟರ ಅಂತರದಲ್ಲಿ ಇದೆ. ಪೆಟ್ರೋಲ ಬಂಕ ಇದ್ದಕಾರಣ ಆಳಂದದಿಂದ ಹೊಗುವ ವಾಹನಗಳು ನಿಧಾನವಾಗಿ ಹೊಗುತ್ತವೆ ಎಂದರೆ ಸರಿ. ಘಟನಾ ನಡೆದ ಸ್ಥಳ ಪೆಟ್ರೋಲ ಬಂಕ ಇರುವ ಕಡೆಯೆ ಇರುತ್ತದೆ ಎಂದರೆ ಸಾಕ್ಷಿಯು 100 ಮೀಟರ ಅಂತರದಲ್ಲಿ ಇರುತ್ತದೆ ಎಂದು ಹೇಳುತ್ತಾರೆ. ಎನಡಿಪಿ ಪೆಟ್ರೋಲ ಬಂಕ ಆಳಂದ ಕಲಬುರಗಿ ರಸ್ತೆಯ ಪೂರ್ವ ದಿಕ್ಕಿಗೆ ಬರುತ್ತದೆ ಎಂದರೆ ಸರಿ. ಘಟನೆ ನಡೆದ ದಿನ ಆರೋಪಿಯ ವಾಹನ ಪೂರ್ವದಿಕ್ಕಿಗೆ ಪಲ್ಟಿಯಾಗಿ ಬಿದ್ದಿತು ಎಂದರೆ ಸರಿ. ಆರೋಪಿ ವಾಹನವನ್ನು ಅತೀವೆಗವಾಗಿ ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಬಂದನೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿ ಅಲ್ಲ. ಆರೋಪಿ ಆಳಂದದಿಂದ ಕಲಬುರಗಿ ರಸ್ತೆಯ ಎಡಭಾಗದಲ್ಲಿ ನಿಧಾನವಾಗಿ ಚಲಾಯಿಸಿಕೊಂಡು ಬರುತ್ತಿದ್ದ ಎಂದರೆ ಸರಿ. ಮೃತ ಶ್ರೀಶೈಲ ಹಾಗೂ ಶಿವಾನಂದ ಮುಂದೆ ಹೊಗುತ್ತಿದ್ದ ಲಾರಿಯನ್ನು ಓವರ ಟೆಕ ಮಾಡಲು ಹೋಗಿ ಆರೋಪಿ ವಾಹನಕ್ಕೆ ಡಿಕ್ಕಿಪಡಿಸಿರುತ್ತಾರೆ ಎಂದರೆ ಸರಿ ಅಲ್ಲ. ಮೃತ ಶ್ರೀಶೈಲ ಹಾಗೂ ಶಿವಾನಂದ ವಾಹನ ಬಂದ ಕಾರಣ ಆರೋಪಿ ತನಗೆ ಡಿಕ್ಕಿಪಡಿಸುತ್ತಾರೆ ಎಂದು ಎಡಭಾಗಕ್ಕೆ ಕಾರ ತೆಗೆದುಕೊಂಡ ಕಾರಣ ಪಲ್ಟಿಯಾಗಿರುತ್ತದೆ ಎಂದರೆ ಸರಿ ಅಲ್ಲ. ಆರೋಪಿಯ ತಪ್ಪು ಇರದಿದ್ದರು ಮೃತ ಶ್ರೀಶೈಲ ಹಾಗೂ ಶಿವಾನಂದ ರವರ ತಪ್ಪಿದ್ದರು ಆರೋಪಿಯ ವಾಹನದ ದಾಖಲೆಗಳು ಸರಿಯಾಗಿದ್ದ ಕಾರಣ ಅವನ ಮೇಲೆ ಚಾಸಾ-1 ರವರು ಸುಳ್ಳು ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿ ಅಲ್ಲ.

ದಿ.14.05.2017 ರಂದು 4 ಜನರಿಗೆ ಪೋಲಿಸರು ಕರೆಸಿದ್ದರು. ನನ್ನ ಪ್ರಕಾರ ಮಧ್ಯಾಹ್ನ 1-2 ಗಂಟೆಗೆ ಕರೆಸಿದ್ದರು. ಆರೋಪಿಯನ್ನು ಪೋಲಿಸರು ತೋರಿಸಿದ ನಂತರವೆ ನನಗೆ ಗೊತ್ತಾಯಿತು. ಘಟನೆ ನಡೆದಾಗ ಆರೋಪಿಗು ಗಾಯ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಪೋಲಿಸ ಠಾಣೆಯಲ್ಲಿ ಆರೋಪಿ ಒಬ್ಬನೆ ಇದ್ದನು. ಪೋಲಿಸರು ಈ ಮೇಲೆ ಹೇಳಿದಂತೆ ನನ್ನ ಹೇಳಿಕೆಯನ್ನು ತೆಗೆದುಕೊಂಡಿರುತ್ತಾರೆ ಎಂದರೆ ಸರಿ. ನನ್ನ ಹೇಳಿಕೆಯನ್ನು ಅಪಘಾತವಾದ ನಂತರ ತೆಗೆದುಕೊಂಡಿರುತ್ತಾರೆ. ನನ್ನ ಹೇಳಿಕೆಯನ್ನು ಪೋಲಿಸರು ಬೆರಳಚ್ಚು ಮಾಡಿಕೊಂಡಿರುತ್ತಾರೆ. ಚಾಸಾ-1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿ ಅಲ್ಲ. ನಾನು ಪೋಲಿಸರ ಎದುರು ಹೇಳಿಕೆಯಾಗಲಿ ಪುರವಣಿ ಹೇಳಿಕೆಯಾಗಲಿ ನೀಡಿಲ್ಲ ಎಂದರೆ ಸರಿ ಅಲ್ಲ. ದಿ.12.05.2017 ರಂದು ಪೋಲಿಸರು ಕರೆಯಿಸಿ ನನ್ನ ಪುರವಣಿ

ಹೇಳಿಕೆಯನ್ನು ತೆಗೆದುಕೊಂಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿ ಅಲ್ಲ.

ದಿಃ03.05.2017 ರಂದು ಘಟನೆ ಜರುಗಿತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿ ಅಲ್ಲ.. ಚಾಸಾ-1 ರವರ ತಮ್ಮಂದಿರಾದ ಶ್ರೀಶೈಲ ಹಾಗೂ ಶಿವಾನಂದ ರವರು ಮೋಟಾರ ವಾಹನ ನಂ.ಕೆಎ-32 ಇಬಿ-3268 ರಲ್ಲಿ ಹೊಲಕ್ಕೆ ಹೊಗುತ್ತಿದ್ದಾಗ ಎಇಟ ಪೇಟ್ರೊಲ ಬಂಕ ಖೋಡಿಯಾಳ ಕ್ರಾಸ ಹತ್ತಿರ ಕಾರ ಸಂಖ್ಯೆ ಕೆಎ-32 ಜಿ-6448 ರ ಚಾಲಕ ಕಾರನ್ನು ಅತೀವೆಗವಾಗಿ ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಬಂದು ಅವರಿಬ್ಬರಿಗೆ ಡಿಕ್ಕಿಪಡಿಸಿದ ಕಾರಣ ಶ್ರೀಶೈಲ ಸ್ಥಳದಲ್ಲೆ ಮೃತಪಟ್ಟಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿ ಅಲ್ಲ. ಶಿವಾನಂದ ರವರಿಗೆ ಅಸ್ತವ್ಯಸ್ತವಾಗಿ ಭಾರಿಗಾಯವಾಗಿರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿ ಅಲ್ಲ. ನಮ್ಮೂರಿನ ನಾಗಣ್ಣ ಅವನನ್ನು ಅಂಬ್ಯುಲೆನ್ಸನಲ್ಲಿ ಯುನೈಟೆಡ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿ ಅಲ್ಲ. ದಿಃ12.05.2017 ರಂದು ಆರೋಪಿಯನ್ನು ತೋರಿಸಿ ಅಪಘಾತ ಪಡಿಸಿರುವ ವ್ಯಕ್ತಿ ಅವನೆ ಎಂದು ಹೇಳಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿ ಅಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ